# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 21 / 2021

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**1 ನೇ ಆರೋಪಿ : ಅನ್ವರ್ ಲೇಟ್ ಗೌಸ್ ಖಾನ್**
**61 ವರ್ಷಗಳು, ಅಂಚಿಬಸವನಪಾಳ್ಯ ಗ್ರಾಮ**
**ಕುದೂರು ಹೋಬಳಿ, ಮಾಗಡಿ ತಾಲ್ಲೂಕು.**

**2 ನೇ ಆರೋಪಿ : ಸಫಿ @ ಸಫಿವುಲ್ಲಾ ಖಾನ್ ಬಿನ್ ದಸ್ತಗಿರ್ ಖಾನ**
**43 ವರ್ಷಗಳು, ಅಂಚಿಬಸವನಪಾಳ್ಯ ಗ್ರಾಮ**
**ಕುದೂರು ಹೋಬಳಿ, ಮಾಗಡಿ ತಾಲ್ಲೂಕು.**

**3 ನೇ ಆರೋಪಿ : ಅಮೀದ್ ಖಾನ್ ಬಿನ್**
**ವರ್ಷಗಳು, ಅಂಚಿಬಸವನಪಾಳ್ಯ ಗ್ರಾಮ**
**ಕುದೂರು ಹೋಬಳಿ, ಮಾಗಡಿ ತಾಲ್ಲೂಕು.**

**4 ನೇ ಆರೋಪಿ : ನೂರುವುಲ್ಲಾ ಖಾನ್ ಬಿನ್ ದಸ್ತಗಿರಿಖಾನ್**
**36 ವರ್ಷಗಳು, ಅಂಚಿಬಸವನಪಾಳ್ಯ ಗ್ರಾಮ**
**ಕುದೂರು ಹೋಬಳಿ, ಮಾಗಡಿ ತಾಲ್ಲೂಕು.**

## <u>ದೋಷರೋಪಣೆ</u>

(ಶ್ರೀಮತಿ. ಧನಲಕ್ಷ್ಮಿ. ಎಂ, ಬಿ.ಎ.ಎಲ್, ಎಲ್.ಎಲ್.ಬಿ, ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

ದಿನಾಂಕ 14-08-2019 ರಂದು ಕುದೂರು ಹೋಬಳಿ, ಅಂಚಿಬಸವನಪಾಳ್ಯ ಗ್ರಾಮದ ಚಾಸಾ-2 ರವರಿಗೆ ಸೇರಿದ ಸರ್ವೆ ನಂಬರ್-6 ರ ಜಮೀನಿಗೆ ಸಂಜೆ 4.10 ಗಂಟೆಯ ಸಮಯದಲ್ಲಿ 3 ನೇ ಆರೋಪಿಗೆ ಸೇರಿದ ಹಸುಗಳು ಹೋಗಿ ಮೇಯುತ್ತಿದ್ದಾಗ ಅವುಗಳನ್ನು ಚಾಸಾ-2 ರವರು ಓಡಿಸಿದ್ದು, ಇದೇ ನೆಪ ಇಟ್ಟುಕೊಂಡು ಹಳೆ ದ್ವೇಷದಿಂದ 3 ನೇ ಆರೋಪಿಯು 1, 2 ಮತ್ತು 4 ನೇ ಆರೋಪಿಯೊಂದಿಗೆ ಬಂದು ಚಾಸಾ-2 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಜಗಳ ತೆಗೆದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-504 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಚಾಸಾ-2 ರವರ ಮನೆಯ ಹತ್ತಿರ ಹೋಗಿ ಜಗಳ ತೆಗೆದು ನಿಮ್ಮಗಳಲ್ಲಿ 1 ಮತ್ತು 2 ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಒದ್ದು, ಅದೇ ರೀತಿ 4 ನೇ ಆರೋಪಿ ಕೈಗಳಿಂದ ಚಾಸಾ-2 ರವರ ಮುಖಕ್ಕೆ ಗುದ್ದಿ ಸಾಧಾರಣ ಸ್ವರೂಪದ ನೋವುಂಟು ಮಾಡಿದ್ದು, 3 ನೇ ಆರೋಪಿ ಚಾಸಾ-3 ರವರಿಗೆ ಕೈಗಳಿಂದ ಹಲ್ಲೆ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-323 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಮೂರನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ 3 ನೇ ಆರೋಪಿ ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ-2 ರವರ ತಲೆ, ಕುತ್ತಿಗೆಗೆ ಮತ್ತು ಮೈಕೈಗೆ ಹೊಡೆದು ನೋವುಂಟು ಮಾಡಿದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-324 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ನಾಲ್ಕನೇಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಚಾಸಾ-2 ರವರ ಮನೆಯ ಹತ್ತಿರ ಬಂದು ಚಾಸಾ-1 ಮತ್ತು 4 ರವರಿಗೆ ಬಾಯಿಗೆ ಬಂದಂತೆ ಬೈದು, ಚಾಸಾ-1 ರವರಿಗೆ 3 ನೇ ಆರೋಪಿ ಸಾರ್ವಜನಿಕ ರಸ್ತೆಯಲ್ಲಿ ತಳ್ಳಾಡಿ ಚಾಸಾ-1 ರವರ ಸೀರೆಯನ್ನು ಹಿಡಿದುಕೊಂಡು ಎಳೆದಾಡಿ ಸಾರ್ವಜನಿಕವಾಗಿ ಅವಮಾನ ಪಡಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-354(ಬಿ) ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಕೇಳಲು ಹೋದ ಚಾಸಾ-3 ರವರ ಮೇಲೂ ಆರೋಪಿತರುಗಳು ಜಗಳ ಮಾಡಿ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಸದರಿ ಕೃತ್ಯವು ಭಾರತೀಯ

ದಂಡ ಸಂಹಿಂತೆ ಕಲಂ-506 ಸಹವಾಚಕ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**ಆರೋಪಿ-1 ರಿಂದ 4 ನೇ ರವರ ಉತ್ತರ ಃ**

ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಚಿಸುವಿರೋ ?

**ಆರೋಪಿ-1 ರಿಂದ 4 ನೇ ರವರ ಉತ್ತರ ಃ**

ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಹೇಳಿ, ವಿವರಿಸಿ, ಅವನ ಸಹಿಯನ್ನು ಪಡೆಯಲಾಗಿದೆ ಎಂದು ದೃಢೀಕರಿಸಿದ್ದೇನೆ.

( ಈ ಮೇಲ್ಕಂಡ ಆರೋಪಿತರುಗಳ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ )

( ಧನಲಕ್ಷ್ಮೀ ಎಂ )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.